# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 1575/2019

**ಪಿಡಬ್ಲ್ಯೂ-1**

**ಸಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಮುದ್ದುಶೆಟ್ಟಿ |
| ತಂದೆಯ ಹೆಸರು | - | ಮುತ್ತು ಶೆಟ್ಟಿ |
| ವಯಸ್ಸು | - | 64 ವರ್ಷ |
| ಕೆಲಸ | - | ಕೂಲಿ |
| ವಾಸ | - | ಕೆ ಆರ್ ನಗರ |

**ದಿನಾಂಕ 06/04/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 2 ನನ್ನ ಹೆಂಡತಿ, ಚಾಸಾ 3 ನನ್ನ ಮಗ, ಚಾಸಾ 4 ನನ್ನ ಅತ್ತೆ. ಆರೋಪಿತರು ನನ್ನ ಬೀಗರು ಅಂದರೆ ಚಾಸಾ 3 ರವರ ಅತ್ತೆ ಮಾವ. ಜಮುನ ನನ್ನ ಮಗಳು. ನನ್ನ ಮಗಳನ್ನು ಆರೋಪಿತರ ಮಗ ದಿಲೀಪ್ ಸುಮಾರು 3 ವರ್ಷಗಳ ಹಿಂದೆ ಗೌಡಗೆರೆಯ ಬಳಿ ಇರುವ ಪೆಟ್ರೋಲ್ ಬಂಕ್ ಬಳಿ ಕೊಲೆ ಮಾಡಿರುತ್ತಾನೆ ಆ ಬಗ್ಗೆ ನಾನು ಹುಣಸೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಅ ಸಂಬಂಧ ನಾನು ಮತ್ತು ನನ್ನ ಹೆಂಡತಿ ಸುಮಾರು 3 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ರಾತ್ರಿ ಸಮಯದಲ್ಲಿ ನನ್ನ ಮನೆಯ ಮುಂದೆ ಬಂದು ಆರೋಪಿತರು ನನ್ನ ಮಗನ ವಿರುದ್ಧ ದೂರನ್ನು ವಾಪಸ್ ತೆಗೆದುಕೋ ಎಂದು ಕೈಗಳಿಂದ ನನ್ನ ಮೈಗೆ ಹೊಡೆದರು ನನಗೆ ನೋವಾಯಿತು. ಕೇಸ್ ನ್ನು ವಾಪಸ್ ತೆಗೆದುಕೊಳ್ಳದೇ ಇದ್ದರೆ ನಿನ್ನ ಮಗಳನ್ನು ಕೊಲೆ ಮಾಡಿದ ರೀತಿಯಲ್ಲಿ ನಿನ್ನ ಮಗನನ್ನು ಸಹ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ, ಬಾಯಿಗೆ ಬಂದಂತೆ ಬೈದಿಕೊಂಡು ಹೋದರು.

ಅ ಸಂಬಂಧ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರಿನ ಮೇಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ದೂರನ್ನು ನಿಪಿ 1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು.

ಅನಂತರ ಏನು ಕ್ರಮವಾಯಿತು ಎಂದು ನನಗೆ ಗೊತ್ತಿಲ್ಲ ನಂತರ ಪೊಲೀಸರು ಮನೆಯ ಹತ್ತಿರ ಬಂದರು ನಾನು ಅವರಿಗೆ ಘಟನೆ ನಡೆದ ಸ್ಥಳವನ್ನು ತೋರಿಸಿದೆ. ಪೊಲೀಸರು ಸ್ಥಳ ಮಹಜರು ಮಾಡಿರುತ್ತಾರೆ. ಮಹಜರಿನ ಮೇಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಮಹಜರನ್ನು ನಿಪಿ 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**<u>ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ</u>**

ದಿಃ 06.04.2018 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಮ್ಮ ಮನಗೆ ಆರೋಪಿತರು ಅಕ್ರಮವಾಗಿ ಪ್ರವೇಶ ಮಾಡಿ ಬೊ.... ಮಕ್ಕಳೇ ಮತ್ತು ಸು... ಮಕ್ಕಳೇ ಎಂದು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ.

**<u>ಪಾಟೀ ಸವಾಲು ಶ್ರೀ ಎಸ್ ಎಸ್ ಆರ್ ಆರೋಪಿಪರ ವಕೀಲರಿಂದಃ</u>**

ನಾನು ಹಾಗೂ 1 ನೇ ಆರೋಪಿ ಸುಮಾರು ವರ್ಷದಿಂದ ಸ್ನೇಹಿತರು ಎಂದರೆ ಸರಿಯಲ್ಲ. ಚಾಸಾ 3 ಆರೋಪಿತರ ಮಗಳನ್ನು ಸುಮಾರು 3 ವರ್ಷಗಳ ಹಿಂದೆ ಮದುವೆಯಾದರು. ನನ್ನ ಮಗಳು ಕಾಳ ಮಾತ್ರೆಯನ್ನು ನುಂಗಿ ಆತ್ಮಹತ್ಯೆ ಮಾಡಿಕೊಂಡರು ಎಂದರೆ ಸರಿಯಲ್ಲ. ಅದರೂ ಸಹ ಆರೋಪಿತರ ವಿರುದ್ಧ ನಾನು ಸುಳ್ಳು ದೂರನ್ನು ನೀಡಿ ವಿನಾಃ ಕಾರಣ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಗಲಾಟೆ ಆದ ಸುವಯದಲ್ಲಿ ನಾನು, ಚಾಸಾ 2 ಮತ್ತು 3 ರವರು ಇದ್ದೇವು.

ಆರೋಪಿತರು ನನ್ನ ಮಗಳ ತೀರಿಹೋದ ನಂತರ ನಮ್ಮ ಮನೆಯ ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆಗಿದೆ ಎಂದು ಹೇಳುವ ದಿನ ಆರೋಪಿತರು ಅವರ ಗ್ರಾಮದಲ್ಲಿ ಇದ್ದರು ಕೆ ಆರ್ ನಗರಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಕೈಯಲ್ಲಿ ಹೊಡೆದರು ದೊಣ್ಣೆ ತೋರಿಸಿದರು. ಗಲಾಟೆ ನಡೆದ ಸಮಯದಲ್ಲಿ ನಮ್ಮ ಮನೆಯ ಸುತ್ತ ಜನರಿದ್ದರು, ಮಹದೇವ ಮತ್ತು ಕೃಷ್ಣಪ್ಪ ಎಂಬುವವರು ಇದ್ದರು. ಗಲಾಟೆ ಆದ ದಿನದಂದು ನಾನು ಆಸ್ಪತ್ರೆಗೆ ಹೋಗಿದ್ದೆ. ಗಲಾಟೆ ಆದ 2 ದಿನದ ನಂತರ ನಾನು ದೂರು ನೀಡಿದ್ದೇನೆ. ತಡವಾಗಿ ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ದೂರನ್ನು ಚಾಸಾ 3 ರವರು ಬರೆದಿದ್ದಾರೆ. ದೂರು ನೀಡಲು ನನ್ನ ಜೊತೆ ಚಾಸಾ 2 ಮತ್ತು 3 ಬಂದಿದ್ದರು. ಅ ದಿನ ದೂರನ್ನು ಹೊರತುಪಡಿಸಿ ಬೇರೆ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ಘಟನೆ ನಡೆದ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ ಖಾಲಿ ನಿವೇಶನ, ಪಶ್ಚಿಮಕ್ಕೆ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮನೆ. ಯಾರದ್ದು ಮಾತನ್ನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರು ಸಮಯದಲ್ಲಿ ನಾನು ಸ್ಥಳಕ್ಕೆ ಹೋಗಿಲ್ಲ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 1575/2019</u>**

**<u>ಪಿಡಬ್ಲೂ-2</u>**

**<u>ಸಿಡಬ್ಲೂ-2</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಕುಮಾರಿ |
| ಗಂಡನ ಹೆಸರು | - | ಮುತ್ತುಶೆಟ್ಟಿ |
| ವಯಸ್ಸು | - | 50 ವರ್ಷ |
| ಕೆಲಸ | - | ಗೃಹಿಣಿ |
| ವಾಸ | - | ಕೆ ಆರ್ ನಗರ |

**<u>ದಿನಾಂಕ 06/04/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಚಾಸಾ 1 ನನ್ನ ಗಂಡ, ಚಾಸಾ 3 ನನ್ನ ಮಗ, ಚಾಸಾ 4 ನನ್ನ ಗಂಡನ ಅತ್ತೆ. ಆರೋಪಿತರು ನನ್ನ ಬೀಗರು ಅಂದರೆ ಚಾಸಾ 3 ರವರ ಅತ್ತೆ ಮಾವ. ಜಮುನ ನನ್ನ ಮಗಳು. ನನ್ನ ಮಗಳನ್ನು ಆರೋಪಿತರ ಮಗ ದಿಲೀಪ್ ಸುಮಾರು 3 ವರ್ಷಗಳ ಹಿಂದೆ ಗೌಡಗೆರೆಯ ಬಳಿ ಇರುವ ಪೆಟ್ರೋಲ್ ಬಂಕ್ ಬಳಿ ಕೊಲೆ ಮಾಡಿರುತ್ತಾನೆ. ಆ ಬಗ್ಗೆ ನಾವು ಹುಣಸೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಅ ಸಂಬಂಧ ನಾನು ಮತ್ತು ನನ್ನ ಗಂಡ ಹಾಗೂ ಚಾಸಾ 3 ರವರು ದಿಃ 06.04.2018 ರಂದು ಮನೆಯಲ್ಲಿ ಇದ್ದಾಗ ರಾತ್ರಿ 8 ಗಂಟೆ ಸಮಯದಲ್ಲಿ ಅರೋಪಿತರು ನಮ್ಮ ಮನೆಯ ಮುಂದೆ ಬಂದು ಆರೋಪಿತರ ಮಗನ ವಿರುದ್ಧ ದೂರನ್ನು ವಾಪಸ್ ತೆಗೆದುಕೋ ಎಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ನಮಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಅದನ್ನು ಹೊರತುಪಡಿಸಿ ಬೇರೆ ಏನು ಗೊತ್ತಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**<u>ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ</u>**

ಆರೋಪಿತರು ನಮ್ಮ ಮನೆಗೆ ಅಕ್ರಮವಾಗಿ ಪ್ರವೇಶ ಮಾಡಿ ನನ್ನ ಗಂಡನಿಗೆ ಕೈಗಳಿಂದ ಮೈಗೆ ಹೊಡೆದು ಬೈದು ಕೇಸ್ ವಾಪಸ್ಸು ತೆಗೆದುಕೊಳ್ಳಿ, ಇಲ್ಲವಾದಲ್ಲಿ ಚಾಕುವಿನಿಂದ ಕೊಲೆ ಮಾಡುತ್ತೇನು ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಆಗ ನಾನು, ಚಾಸಾ 3 ಮತ್ತು 4 ಜಗಳ ಬಿಡಿಸಿದೆವು ಎಂದರೆ ಸರಿ. ಅ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ ಎಂದರೆ ಸರಿ.

<u>ಮರು ವಿಚಾರಣೆ</u> – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ